<u>ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ತಿ.ನರಸೀಪುರ.</u>

<u>ಸಿ.ಸಿ.ನಂ.**428/2017**</u>

ಸರಕಾರ ಪರಃ ಬನ್ನೂರು ಪೊಲೀಸ್ ಠಾಣೆ, ತಿ.ನರಸೀಪುರ -ವಿರುದ್ಧ- ನಂಜುಂಡ

<u>ದೋಷಾರೋಪಣೆ</u>

ನಾನು ಚೇತನ್ ಅನ್ನಾಧಾನಿ ಮಂಜುನಾಥ, ಬಿ.ಎ.ಎಲ್., ಎಲ್.ಎಲ್.ಎಂ., ಪ್ರ. ದ. ನ್ಯಾ ದಂ., ತಿ.ನರಸೀಪುರ ಈ ಮೂಲಕ,

ಆರೋಪಿತರಾದಃ

ನಂಜುಂಡ ಉ ನಂಜುಂಡಶೆಟ್ಟಿ
ಬಿನ್.ಲೇಟ್.ಒಡ್ಡಲ್ಲಶೆಟ್ಟಿ
ಸುಮಾರು 52 ವರ್ಷ ವಯಸ್ಸು,
ವಾಸ ಕುಂತನಹಳ್ಳಿ ಗ್ರಾಮ,
ತಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ.

<u>ನಿಮ್ಮ ಮೇಲಿರುವ ಆರೋಪಣೆ ಏನೆಂದರೆ,</u>

ದಿನಾಂಕ 06.06.2017 ರಂದು ರಾತ್ರಿ 8.45 ಗಂಟೆಯ ಸಮಯದಲ್ಲಿ ಬನ್ನೂರು ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಕುಂತನಹಳ್ಳಿ ಗ್ರಾಮದಲ್ಲಿ ಚಾಸಾ.1 ರವರ ಮನೆಯ ಮುಂದುಗಡೆ ಆರೋಪಿಯಾದ ನೀವು ಕಲ್ಲನ್ನು ತಂದು ಹಾಕುತ್ತಿದ್ದಾಗ ಚಾಸಾ.1 ರವರು ನಮ್ಮ ಮನೆಯ ಮುಂದಕ್ಕೆ ಯಾಕೆ ಕಲ್ಲನ್ನು ಹಾಕುತ್ತಿದ್ದೀಯಾ ಎಂದು ಕೇಳಿದಕ್ಕೆ ಆರೋಪಿಯಾದ ನೀವು ಏಕಾಏಕಿ ಕೈಯಿಂದ ಚಾಸಾ.1 ರವರ ಕಪಾಲಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಪಡಿಸಿರುತ್ತೀರಿ, ಆ ಮೂಲಕ ನೀವು ಭಾ.ದಂ.ಸಂ. ಕಲಂ 323 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವಾನ್ನು ನನ್ನ ನ್ಯಾಯಿಕ ವ್ಯಾಪ್ತಿಯಲ್ಲಿ ಮಾಡಿದ್ದೀರಿ.

ಅದೇ ರೀತಿ ಮೇಲೆ ಹೇಳಿದ ದಿವಸ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಕಲ್ಲಿನಿಂದ ಚಾಸಾ.1 ರವರ ತಲೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಪಡಿಸಿರುತ್ತೀರಿ, ಆ ಮೂಲಕ ನೀವು ಭಾ.ದಂ.ಸಂ. ಕಲಂ 324 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವಾನ್ನು ನನ್ನ ನ್ಯಾಯಿಕ ವ್ಯಾಪ್ತಿಯಲ್ಲಿ ಮಾಡಿದ್ದೀರಿ.

ಅದೇ ರೀತಿ ಮೇಲೆ ಹೇಳಿದ ದಿವಸ, ವೇಳೆ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ.1 ರವರಿಗೆ ಕೊಲೆ ಬೆದರಿಕೆ ಹಾಕಿದ್ದು, ಆ ಮೂಲಕ ನೀವು ಭಾ.ದಂ.ಸಂ. ಕಲಂ 506 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವಾನ್ನು ನನ್ನ ನ್ಯಾಯಿಕ ವ್ಯಾಪ್ತಿಯಲ್ಲಿ ಮಾಡಿದ್ದೀರಿ.

ಆದುದರಿಂದ ಈ ಆರೋಪಣೆಯನ್ನು ನಿಮ್ಮ ಮೇಲಿಟ್ಟಿದ್ದು, ಅದರ ವಿಚಾರಣೆಯು ನಿಮ್ಮ ಮೇಲೆ ನಡೆಯತಕ್ಕದ್ದೆಂದು ಈ ಮೂಲಕ ಆದೇಶಿಸುತ್ತೇನೆ.

ಪ್ರಶ್ನೆಃ ಇದೀಗ ನಿಮಗೆ ಓದಿ ಹೇಳಿದ ಆರೋಪಣೆ ತಿಳಿಯಿತೇ

ಉತ್ತರಃ

ಪ್ರಶ್ನೆಃ ನೀವು ತಪ್ಪೊಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ಪರ ಪ್ರತಿರಕ್ಷಣೆ ಏನಾದರೂ ಇದೆಯೇ? ವಿಚಾರಣೆ ಆಗಬೇಕೇ?

ಉತ್ತರಃ

(ಮೇಲಿನ ಆರೋಪಿತರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಸದ್ರಿ ಆರೋಪಿತರಿಂದ ಪಡೆದಿದ್ದು ಅದು ಸತ್ಯಾಂಶವನ್ನು ಹೊಂದಿದೆಯೆಂದು ಪ್ರಮಾಣೀಕರಿಸಲಾಗಿದೆ.)

ದಿನಾಂಕಃ 27.12.2022 ಪ್ರ.ದ.ನ್ಯಾ.ದಂ., ತಿ.ನರಸೀಪುರ.